1) ಚಾಮುಂಡೇಶ್ವರಿ ರಸ್ತೆ ಬದಿಯ ಕೊಳಚೆ ಪ್ರದೇಶದಲ್ಲಿನ 43 ಕುಟುಂಬಗಳು

2) ಸಿದ್ಧಪ್ಪಾಜಿ ರಸ್ತೆ ಕೊಳಚೆ ಪ್ರದೇಶದಲ್ಲಿನ 109 ಕುಟುಂಬಗಳು

3) ದುರ್ಗಾಂಭ ದೇವಸ್ಥಾನ ಕೊಳಚೆ ಪ್ರದೇಶದಲ್ಲಿನ 54 ಕುಟುಂಬಗಳನ್ನು ಕ್ಯಾತಮಾರನಹಳ್ಳಿ ಬಡಾವಣೆಯಲ್ಲಿನ ನಿರ್ಮಿಸಲಾಗಿರುವ ಮಂಡಳಿಯ ಮನೆಗಳಿಗೆ ಸ್ಥಳಾಂತರಿಸಲಾಗಿದೆ.

4) ರಾಜಾ ಸೋಪ್ ಫ್ಯಾಕ್ಟರಿ ಕೊಳಚೆ ಪ್ರದೇಶದ 148 ಕುಟುಂಬಗಳನ್ನು ಸಾತಗಳ್ಳಿ ಬಡಾವಣೆಯ ಮಂಡಳಿಯ ಮನೆಗಳಿಗೆ ಸ್ಥಳಾಂತರಿಸಿ ಪುನರ್‌ವಸತಿ ಕಲ್ಪಿಸಲಾಗಿದೆ.

5) ಜ್ಯೋತಿನಗರ ಕೊಳಚೆ ಪ್ರದೇಶದಲ್ಲಿ 152 ಕುಟುಂಬಗಳಿಗೆ ಅದೇ ಜಾಗದಲ್ಲಿ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದೆ.

ಅ) ಈ ಕ್ಷೇತ್ರದ ಕೊಳಚೆ ನಿವಾಸಿಗಳಿಗಾಗಿ ಮಂಡಳಿ ವತಿಯಿಂದ ನಿರ್ಮಿಸಿರುವ ಯಾವುದೇ ಮನೆಗಳನ್ನು ವಿತರಿಸಲು ಇಲ್ಲಿ ಬಾಕಿ ಇರುವುದಿಲ್ಲ.

ಸಹಕಾರ ಸಂಘಗಳಿಗೆ ನಾಮಕರಣವನ್ನು ರದ್ದುಪಡಿಸುವ ಬಗ್ಗೆ

558 (845) ಶ್ರೀ ಎನ್.ಪಿ. ಮುದ್ದಹನುಮೇಗೌಡ (ಕುಣಿಗಲ್) :ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸರ್ಕಾರ ಮುಂದೆ ಸಹಕಾರ ಸಂಘಗಳಿಗೆ ನಾಮನಿರ್ದೇಶನವನ್ನು ರದ್ದುಪಡಿಸುವ ಪ್ರಸ್ತಾವ ಇದೆಯೇ;

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು):

ಅ) ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿ ಧನ ಸಹಾಯ ಹೊಂದಿದ ದೇವಸ್ಥಾನಗಳು

559 (846) ಶ್ರೀ ಎನ್.ಪಿ. ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ದೇವಸ್ಥಾನ ಸಂಖ್ಯೆ ಮತ್ತು 1996-97ನೇ ಸಾಲಿನಲ್ಲಿ ಧನ ಸಹಾಯವನ್ನು ನೀಡಿದ ದೇವಾಲಯಗಳು ಎಷ್ಟು;

ಆ) ಈವರೆಗೆ ಬಿಡುಗಡೆ ಮಾಡಿರುವ ಹಣದ ಮೊತ್ತ ಎಷ್ಟು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ) ರಾಜ್ಯದಲ್ಲಿ ಒಟ್ಟಾರೆ 43,217 ಮುಜರಾಯಿ ದೇವಸ್ಥಾನಗಳಿವೆ, 1996-97ನೇ ಸಾಲಿನಲ್ಲಿ ಧನ ಸಹಾಯವನ್ನು ಇನ್ನೂ ಬಿಡುಗಡೆ ಮಾಡಬೇಕಾಗಿದೆ.

ಅ) ಪ್ರಶ್ನೆ ಉದ್ಭವಿಸುವುದಿಲ್ಲ.

ಆಶ್ರಯ ಯೋಜನೆಯಡಿಯಲ್ಲಿ ಹಂಚಿರುವ ನಿವೇಶನಗಳು

560 (847) ಶ್ರೀ ಎಸ್.ಪಿ ಮುದ್ದಹನುಮೇಗೌಡ, (ಕುಣಿಗಲ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ರಾಜ್ಯದಲ್ಲಿ ಎಷ್ಟು ಜನರಿಗೆ ನಿವೇಶನಗಳನ್ನು ವಿತರಿಸಲಾಗಿದೆ;

ಆ) ತುಮಕೂರು ಜಿಲ್ಲೆಯಲ್ಲಿ ಇದುವರೆಗೆ ಎಷ್ಟು ನಿವೇಶನಗಳನ್ನು ವಿತರಿಸಲಾಗಿದೆ; ಅದರಲ್ಲಿ ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ನಿವೇಶನಗಳನ್ನು ವಿತರಿಸಲಾಗಿದೆ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):

ಅ) 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ

ಗ್ರಾಮೀಣ	-	82072
ಪಟ್ಟಣ	-	11366
ಒಟ್ಟು		93,438

ನಿವೇಶನ ರಹಿತರಿಗೆ ನಿವೇಶನ ವಿತರಿಸಲಾಗಿದೆ.

ಆ) ತುಮಕೂರು ಜಿಲ್ಲೆಯಲ್ಲಿ 6031 ನಿವೇಶನಗಳನ್ನು ವಿತರಿಸಲಾಗಿದೆ. ಈ ಪೈಕಿ ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ 80 ನಿವೇಶನಗಳನ್ನು ಹಂಚಲಾಗಿದೆ.

ಮೆಟಡೋರ್ ಹಾಗೂ ಮ್ಯಾಕ್ಸಿಕ್ಯಾಬ್‌ಗಳ ಹಾವಳಿ

561 (11) ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ವಿ.ವಿ. ಪುರದ ಬಡಾವಣೆಯ ರೋಶನ್‌ಬಾಗ್ ರಸ್ತೆಯಲ್ಲಿ ಮೆಟಡೋರ್, ಮ್ಯಾಕ್ಸಿಕ್ಯಾಬ್ ಇತ್ಯಾದಿಗಳ ಹಾವಳಿ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಹಾವಳಿಯಿಂದ ಅಲ್ಲಿ ವಾಸ ಮಾಡುತ್ತಿರುವ ಜನತೆಗೆ ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಭಾರಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):